

ಡಾ.ವಿನೋದ ಛೆಬ್ಬಿ

ಸಾಯುವವರಿಗೆ ಕೊನೆಯಾಸೆ ಇರುವಂತೆ ಅವರನ್ನು ನೋಡಿಕೊಳ್ಳುವವವರಿಗೂ ಕೊನೆಯಾಸೆ ಇರಬೇಕು.

# 328: ಹೊಸ ದಾರಿ - 68

ಹಿರಿಯರ ಅಂತ್ಯಕಾಲದಲ್ಲಿ ಚೂರೂ ಪ್ರೀತಿ ಇಲ್ಲದೆ ಭಯಭಕ್ತಿಯಿಂದ ಮಾತ್ರ ಸೇವೆಮಾಡಲು ಸಾಧ್ಯವಿದೆ ಎಂದು ಹೇಳಿದ್ದೆ. ಭಯಭಕ್ತಿಯೂ ಇಲ್ಲದಿರುವಾಗ ಅನಿವಾರ್ಯವಾಗಿ ಬರುವ ಅಂತ್ಯೋಪಚಾರದ ಪ್ರಸಂಗವನ್ನು ಹೇಗೆ ಎದುರಿಸುವುದೆಂದು ಈಸಲ ನೋಡೋಣ.

ಗಂಡು ಸರಿಯಿಲ್ಲವೆಂದು ಗೊತ್ತಿದ್ದೂ ಮದುವೆಯಾಗಿ, ದಾಂಪತ್ಯ ಬಗೆಹರಿಯದೆ ಸಾಕಷ್ಟು ಹೆಂಗಸರು ನನ್ನಲ್ಲಿ ಬಂದಿದ್ದಾರೆ. ಒಲ್ಲದ ಗಂಡನ್ನು ಒಪ್ಪಿಕೊಂಡ ಕಾರಣ ಕೇಳಿದಾಗ ಬಂದ ಉತ್ತರವೇನು ಗೊತ್ತೆ? 'ಮೊದಲು ತವರಿನಿಂದ ಹೊರಬಂದರೆ/ ಒತ್ತಾಯ ತಪ್ಪಿಸಿಕೊಂಡರೆ ಸಾಕಿತ್ತು!' ಇವರೆಲ್ಲ ಮದುವೆ ಎನ್ನುವ ಕಾರ್ಯಕ್ರಮದಲ್ಲಿ ಪಾಲುಗೊಂಡರೇ ಹೊರತು ದಾಂಪತ್ಯದಲ್ಲಲ್ಲ ಎನ್ನುವುದನ್ನು ನೋಡಿದರೆ ಹುಟ್ಟುಮನೆಯಿಂದ ದೂರವಾಗುವುದು ಎಷ್ಟೊಂದು ಅನಿವಾರ್ಯವಾಗಿತ್ತು ಎಂದು ಅರಿವಾಗುತ್ತದೆ. ಇದೇ ಕಾರಣದಿಂದ ಕೆಲವರು ಅಧ್ಯಯನದ ನೆಪದಲ್ಲಿ ಹೆಚ್ಚಿನಂಶ ಪರವೂರಿನಲ್ಲಿ ಕಳೆದರೆ, ಇನ್ನು ಕೆಲವರು ಮದುವೆಯ ನಂತರ ಬೇಕೆಂದೇ ಪರದೇಶಕ್ಕೆ ವಲಸೆ ಹೋಗಿದ್ದಾರೆ. ಹುಟ್ಟುಮನೆಯಿಂದ ಅಂತರ ಕಾಪಾಡಿಕೊಳ್ಳುವ ಇವರ ಇತಿಹಾಸ ದಾರುಣವಾಗಿದೆ. ಇವರ ತಾಯ್ತಂದೆಯರು ಪರಸ್ಪರ ಕಚ್ಚಾಡುತ್ತ (ಅಥವಾ ಧಿಕ್ಕರಿಸುತ್ತ) ಮಕ್ಕಳನ್ನು ಅಲಕ್ಷಿಸಿದ್ದಾರೆ. ಇವರು ಬಾಲ್ಯದಲ್ಲಿ ಅಸಡ್ಡೆ, ಅವಹೇಳನ, ಹಿಂಸೆಗೆ ಒಳಗಾಗಿ ಗಾಸಿಗೊಂಡು ಆತ್ಮಗೌರವ ಕಳೆದುಕೊಂಡಿದ್ದು ತನ್ನತನವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ. ಇಂಥವರಲ್ಲಿ ನೀವೂ ಒಬ್ಬರಾಗಿದ್ದೀರಿ ಎಂದುಕೊಳ್ಳಿ. ನಿಮ್ಮ ಬದುಕು ಹೇಗಿರುತ್ತದೆ? ಹೆತ್ತವರಿಂದ ಆಶಿಸುವುದನ್ನು ಕೈಬಿಟ್ಟು ಪ್ರತ್ಯೇಕವಾಗಿ ನಿಮ್ಮದೇ ಬದುಕು ಕಟ್ಟಿಕೊಂಡಿರುತ್ತೀರಿ. ಹುಟ್ಟಿನಿಂದ ಪ್ರೀತಿ ಸಿಗದ ನೀವು ಕಟ್ಟಿಕೊಂಡ ಸಂಗಾತಿಯನ್ನು ಮನಃಪೂರ್ವಕ ಪ್ರೀತಿಸಲು ಸಾಧ್ಯವಾಗದೆ ಒದ್ದಾಡುತ್ತ ಇರುತ್ತೀರಿ. ಭದ್ರ ಸಂಬಂಧದ ಮಾದರಿ ಕಾಣದ ನಿಮಗೆ ಕಟ್ಟಿಕೊಂಡ ಸಂಬಂಧವನ್ನು ನಿಭಾಯಿಸುವುದು ಹೇಗೆಂದು ತೋಚುತ್ತಿಲ್ಲ. ಸಂಗಾತಿಯು ಏನನ್ನೋ ಕೆದಕಿದಾಗ ನಿಮ್ಮ ಗಾಯಗಳು ಕೆದಕಿದಂತಾಗಿ ಮುದುರಿ ರಕ್ಷಿಸಿಕೊಳ್ಳುತ್ತ ಇರುತ್ತೀರಿ. ಆಗಾಗ ಕಾಡುವ ಹಳವಂಡದಲ್ಲಿ ಪ್ರೀತಿ ಕೊಡದ ನಿಮ್ಮ ವಿಧಿಯನ್ನು ಶಪಿಸಿಕೊಳ್ಳುತ್ತ ಇರುತ್ತೀರಿ. ಇಂಥದ್ದರಲ್ಲಿ ಒಂದುದಿನ ನಿಮ್ಮ ತಂದೆಯೋ ತಾಯಿಯೋ ಅಂತ್ಯಾವಸ್ಥೆಯಲ್ಲಿ ನಿಮ್ಮಲ್ಲಿಗೆ ಬಂದು ಧ್ವಜ ಊರಿದರೆ ಹೇಗೆನಿಸುತ್ತದೆ, ಹಾಗೂ ಏನು ಮಾಡುತ್ತೀರಿ?

ಆಗ ನಿಮ್ಮೊಳಗೆ ಅದುಮಿಟ್ಟ ಆಕ್ರೋಶ, ಕೋಪ ಉಕ್ಕಿಬರುವುದು ಸಹಜವೆ. ಅವರನ್ನು ಬರಗೊಡಿಸಬಾರದು ಎಂದು ಯೋಚನೆ ಬಂದರೂ ಹಾಗೆ ಮಾಡಲು ಪಾಪಪ್ರಜ್ಞೆ ಅಡ್ಡಿಯಾಗುತ್ತದೆ. ಬಿರುಮಾತಾಡಲು ಹೋದರೆ ಆರೋಗ್ಯ ವಿಷಮಿಸಬಹುದು. ಎದುರಿಸಿ ಪ್ರಶ್ನಿಸಬೇಕೆಂದರೆ ಸಮಯ ಸಂದರ್ಭ ಸರಿಯಾಗಿಲ್ಲ. ಹಾಗೆಂದು ನಿಮ್ಮೊಳಗಿನ ನೋವನ್ನು ಹೊರಹಾಕದ ಹೊರತೂ ಸಾಮಾಧಾನ ಆಗಲಾರದು. ಉಪಾಯವೇನು? ನನಗೂ ಸ್ಪಷ್ಟವಾಗಿರಲಿಲ್ಲ. ನನ್ನಲ್ಲಿ ಚಿಕಿತ್ಸೆಗಾಗಿ ಬಂದ ಒಬ್ಬಳು ಮಹಾತಾಯಿಯಿಂದ ತಿಳಿದುಕೊಂಡೆ.

ಇವಳು ಅಂತ್ಯಾವಸ್ಥೆಯಲ್ಲಿರುವ ತಾಯಿಯನ್ನು ಕಾಣಲು ವಿದೇಶದಿಂದ ಧಾವಿಸಿ ಬಂದಿದ್ದಳು. ಸಾಯುತ್ತಿರುವವಳ ಕೈಹಿಡಿದು, ಈಗಲಾದರೂ ತನ್ನಕಡೆ ಪ್ರೀತಿಯ ನಗು ಬೀರಬಹುದೇನೋ ಎಂದು ಕಾಯ್ದಳು. ಆದರೆ ತಾಯಿಯು ಇನ್ನೊಂದು ಬದಿಯಲ್ಲಿದ್ದ ಮಗನನ್ನೇ ನೋಡುತ್ತ ಪ್ರಾಣಬಿಟ್ಟಾಗ ಇವಳಿಗಾದ ಆಘಾತ, ನಿರಾಶೆ ಅಷ್ಟಿಷ್ಟಲ್ಲ. ಮನೋಚಿಕಿತ್ಸೆಯಲ್ಲಿ ತಾಯಿಯು ಸಾಯುವ ದೃಶ್ಯವನ್ನು ಪುನರ್‌ರಚಿಸಿ ಹೊಸ ನಿರ್ಧಾರ ಕೈಗೊಳ್ಳುವ ಸಂದರ್ಭದಲ್ಲಿ ಆಕೆ ತಾಯಿಗೆ, 'ನನ್ನನ್ನೇಕೆ ನೀನು ಪ್ರೀತಿಸಲಿಲ್ಲ?' ಎಂದು ಪ್ರಶ್ನಿಸಿದಾಗ, 'ನನಗೇ ಯಾರೂ ಪ್ರೀತಿ ಕೊಡಲಿಲ್ಲ, ನಿನಗೆಲ್ಲಿಂದ ಕೊಡಲಿ?' ಎಂದು ತಾಯಿ ಮುಖ ತಿರುವಿದಳು! ನಾನು ಹೇಗೆ ಮುಂದುವರಿಸಬೇಕು ಎಂದು ಗೊಂದಲದಲ್ಲಿ ಇರುವಾಗ ಅವಳ ಅಂತರಂಗದೊಳಗೆ ಏನೋ ಸ್ಫುರಿಸಿ ಹೇಳಿದಳು: 'ಯಾರೂ ಕೊಡದಿದ್ದರೆ ಅಷ್ಟೇ ಹೋಯಿತು, ನಾನು ನಿನಗೆ ಕೊಡುತ್ತೇನೆ!' ಅಂದಿನಿಂದ ತನ್ನ ತಲೆಯೊಳಗಿರುವ ಪ್ರೀತಿ ಕೊಡದ ತಾಯಿಗೆ ತಾನೇ ಪ್ರೀತಿ ಕೊಡುತ್ತ ನೆಮ್ಮದಿ ಕಂಡುಕೊಂಡಿದ್ದಾಳೆ. ಇದನ್ನುಸಾರ್ವತ್ರೀಕರಿಸಬಹುದೇ ಎಂದು ಯೋಚಿಸಿದಾಗ ಹೊಳೆದದ್ದು ಇದು:

ನಿಮ್ಮ ಬೆಳವಣಿಗೆಯಲ್ಲಿ ಮೂರು ಭಾಗಗಳು ಇವೆಯೆಂದು ಕಲ್ಪಿಸಿಕೊಳ್ಳಿ. ಒಂದು: ನೋವುಂಡು ಜರ್ಜರಿತವಾಗಿರುವ ಭಾಗ; ಎರಡು: ನೋವಿನ ಮೂಲದಿಂದ ದೂರವಾಗಿ ಗಾಯ ಮಾಯಿಸಿಕೊಳ್ಳುವ ಭಾಗ; ಮೂರು: ಒಟ್ಟು ಅನುಭವದಿಂದ ಬಗ್ಗಿ ಬದಲಾಗಿ ಮಾಗಿರುವ ಭಾಗ. ಮೊದಲ ಭಾಗವು ತಾಯ್ತಂದೆಯರಿಗೆ ಆರ್ತತೆಯಿಂದ 'ನನ್ನನ್ನೇಕೆ ದೂರೀಕರಿಸಿದೆ?' ಎಂದು ಉತ್ತರ ಸಿಗದ ಪ್ರಶ್ನೆ ಒಡ್ಡುತ್ತಿದ್ದರೆ ಎರಡನೆಯ ಭಾಗವು ಗಾಯಗಳು ತೆರೆದುಕೊಳ್ಳುವ ಭಯದಿಂದ ದೂರವುಳಿಯಲು ನೋಡುತ್ತಿದೆ. ಇನ್ನು, ಮೂರನೆಯ ಭಾಗ ಏನೆನ್ನುತ್ತದೆ? ನೋವಿನ ಅನುಭವದಿಂದ ಮಾಗಿ ವಿನೀತರಾಗಿ ಬದಲಾದ ಇಲ್ಲಿ ನಿಮ್ಮ ಆತ್ಮವಿದೆ. ಆತ್ಮದಲ್ಲಿ ಕರುಣೆಯಿದೆ. ಈ ಕರುಣೆ ಏನು ಹೇಳುತ್ತದೆ? ನನಗಾಗಿದ್ದು ಇನ್ನೊಬ್ಬರಿಗೆ ಆಗಬಾರದು! ಈ ಕರುಣೆಯಿಂದ ಹಿರಿಯರನ್ನು ನೋಡಿ; ಇವರು ಹೇಗೇ ಇರಲಿ, ಇವರಿಗೆ ನೆರವು ನೀಡುವುದು ನಿಮ್ಮ ಮೌಲ್ಯ. ನಿಮ್ಮ ಮೌಲ್ಯಗಳು ನಿಮ್ಮ ಅಂತರಾತ್ಮವನ್ನು ಪ್ರತಿಫಲಿಸುತ್ತವೆ. ಹೀಗೆ ಹಿರಿಯರ ಸೇವೆಯನ್ನು ಒಪ್ಪಿಕೊಂಡಾಗ ವಿಚಿತ್ರವೊಂದು ಜರುಗುತ್ತದೆ: ನಿಮ್ಮ ನೊಂದ ಭಾಗಕ್ಕೆ ಸಾಂತ್ವನ ಸಿಗಲು ಶುರುವಾಗುತ್ತದೆ. ಗಾಯಗಳು ಮಾಯಲು ಶುರುವಾಗುತ್ತವೆ. ಇದು ಹೇಗೆ? ನಮಗೆ ಸಿಗದಿದ್ದನ್ನು ಇನ್ನೊಬ್ಬರಿಗೆ—ಅದರಲ್ಲೂ ನಮಗೆ ಕೊಡದಿದ್ದವರಿಗೆ—ಕೊಡುವಾಗ (ಅವರು ಮೆಚ್ಚುತ್ತಾರೋ ಪಶ್ಚಾತ್ತಾಪ ಪಡುತ್ತಾರೋ, ಅಥವಾ ನಿಮ್ಮನ್ನು ಬಯ್ದುಕೊಳ್ಳುತ್ತಾರೋ ಎನ್ನುವುದು ಸಂಬಂಧವಿಲ್ಲ) ನಿಮ್ಮೊಳಗಿನ ನೊಂದ ಮಗುವಿಗೂ ಕೊಟ್ಟುಕೊಳ್ಳುತ್ತೀರಿ. ಧನ್ಯರಾಗುತ್ತೀರಿ. ನಿಮ್ಮನ್ನು ನಿರ್ಲಕ್ಷಿಸಿದವರ ಹಿತ ಬಯಸುವುದರಿಂದ ನಿಮ್ಮ ಬದುಕು ಸಂಪನ್ನವಾಗುತ್ತದೆ. ಇಲ್ಲಿ ಉದ್ದೇಶವು ಕೊಡದಿರುವವರಿಂದ ಪ್ರೀತಿಯನ್ನು ಕಿತ್ತುಕೊಳ್ಳುವುದಲ್ಲ. ನಿಮಗೇನೂ ಕೊಡದಿರುವವರನ್ನು ಪ್ರೀತಿಸುವುದರಲ್ಲೇ ಸಾರ್ಥಕತೆಯಿದೆ. ಅಂತ್ಯಾವಸ್ಥೆಯಲ್ಲಿ ಇರುವವರಿಗೆ ಪ್ರೀತಿ ಕೊಡುವುದು ನಿಮ್ಮ ಅಂತ್ಯಾಪೇಕ್ಷೆ ಆಗಿರಲಿ.

ಇನ್ನು, ನಿಮ್ಮನ್ನು ನಿರ್ಲಕ್ಷಿಸಿದ್ದವರು ನಿಮ್ಮ ಆಶ್ರಯಿಸುವುದು ಅವರ ಬಗೆಗೆ ಏನು ಹೇಳುತ್ತದೆ? ಬದುಕಿನ ಏಟುಗಳಿಂದ ಅವರೂ ಮೆತ್ತಗಾಗಿ ಮಾಗಿರಬಹುದು. ಬಾಲ್ಯದಲ್ಲಿ ಒಂದುಸಲವೂ ಮಗಳನ್ನು ತನ್ನೊಡನೆ ಮಲಗಿಸಿಕೊಳ್ಳಲು ಇಷ್ಟಪಡದ ಹೆಂಗಸು ಮುಂದೊಂದು ದಿನ ಗಂಡ ತೀರಿಕೊಂಡ ರಾತ್ರಿ ಕೇಳಿದ್ದೇನು? 'ಒಬ್ಬಳೇ ಮಲಗಲು ಭಯವಾಗುತ್ತಿದೆ. ಈ ರಾತ್ರಿ ನಿನ್ನೊಡನೆ ಮಲಗಲೆ?' ತನಗೆ ಕೊಡದಿದ್ದನ್ನೇ ತನ್ನಿಂದ ಬಯಸುವುದನ್ನು ಕಂಡು ಮಗಳಿಗೆ ಅಸಹ್ಯ ಅನಿಸಿದೆಯೇನೋ ನಿಜ. ಆದರೆ ತಾಯಿ ಅಧೀರರಾದುದನ್ನು ಅಲಕ್ಷಿಸುವಂತಿಲ್ಲ.

ಒಂದುವೇಳೆ ಅಂತ್ಯಾವಸ್ಥೆಯಲ್ಲೂ ಮಾಗದಿದ್ದರೆ? ಏನೂ ಅಡ್ಡಿಯಿಲ್ಲ, ನೀವು ಮಾಗಿರುತ್ತೀರಿ! ಯಾರೊಬ್ಬರು ಮಾಗಿದರೂ ಅದು ಸಂಬಂಧವನ್ನು ಜೋಡಿಸುತ್ತದೆ. ಕರುಣಾಳ ನೆನಪು ನಿಮಗಿರಬಹುದು (ಕಂತು: 130) ಒಂಟಿ ಸಂತಾನವಾದರೂ ತಾಯಿಯ ದುರ್ಲಕ್ಷ್ಯಕ್ಕೆ ಗುರಿಯಾಗಿ ಸತ್ತೂಸತ್ತೂ ಬದುಕಿದವಳು. ದೀರ್ಘಚಿಕಿತ್ಸೆಯ ಪರಿಣಾಮವಾಗಿ ತಾಯಿಯ ಆಸೆಬಿಟ್ಟು ಸ್ವಾವಲಂಬಿಯಾಗಿ ತನ್ನನ್ನು ಪ್ರೀತಿಸುತ್ತ ನೆಮ್ಮದಿ ಕಂಡುಕೊಂಡಿದ್ದಾಳೆ. ಸುಮಾರು ವರ್ಷಗಳ ನಂತರ ಇತ್ತೀಚೆಗೆ ಮದುವೆಯೊಂದರಲ್ಲಿ ಆಕೆ ತಾಯಿಯನ್ನು ನೋಡಿ ದಂಗಾದಳು: ಪ್ರೇತಕಳೆ ಮುತ್ತಿಕೊಂಡು ಅರೆಸತ್ತಂತಿದ್ದವಳು ಇವಳೇ ನನ್ನನ್ನು ಹಿಂಸಿಸುತ್ತಿದ್ದವಳು? ಬೆಳೆದು ಮಾಗಿದ ಕರುಣಾಳ ಕೋಪದ್ವೇಷ ಕರಗಿ ಕನಿಕರ ಮಾತ್ರ ಉಳಿಯಿತು. ಒಂದುವೇಳೆ ತಾಯಿ ಹಾಸಿಗೆ ಹಿಡಿದರೆ ಸೇವೆಮಾಡಲು ಯೋಚಿಸುತ್ತಿದ್ದಾಳೆ.

ನೀವೇನನ್ನುತ್ತೀರಿ?

ಸಂಪರ್ಕಕ್ಕೆ: 8494933888;

**Email: vinod.chebbi@gmail.com**